ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 15-12-1999.

# *ಸಂಕಲ್ಪ ಶಕ್ತಿಯ ಮಹತ್ವವನ್ನು ತಿಳಿದು ಅದನ್ನು ಹೆಚ್ಚಿಸಿಕೊಳ್ಳಿರಿ ಮತ್ತು ಪ್ರಯೋಗದಲ್ಲಿ ತನ್ನಿರಿ*

(संकल्प शक्ति के महत्व को जान इसे बढ़ाओ और प्रयोग में लाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಶ್ರೇಷ್ಠಾತಿ ಶ್ರೇಷ್ಠ ತಂದೆಯು ತನ್ನ ನಾಲ್ಕು ಕಡೆ ಇರುವ ಶ್ರೇಷ್ಠ ಮಕ್ಕಳನ್ನು ನೋಡಿ ಖುಷಿಪಡುತ್ತಿದ್ದಾರೆ.  ಏಕೆಂದರೆ ವಿಶ್ವದಲ್ಲಿರುವ ಆತ್ಮರಿಗಿಂತ ಮಕ್ಕಳಾದ ನೀವು ಶ್ರೇಷ್ಠವಾದವರು ಅರ್ಥಾತ್ ಉನ್ನತವಾದವರು ಪ್ರಪಂಚದಲ್ಲಿ ಉನ್ನತವಾದವರು ಎಂದು ಅವರು ಹೇಳುತ್ತಾರೆ. ಆದರೆ ಅದು ಒಂದು ಜನ್ಮಕ್ಕಾಗಿ. ಆದರೆ ಮಕ್ಕಳಾದ ನೀವು ಕಲ್ಪವಿಡೀ ಶ್ರೇಷ್ಠವಾದವರು. ಇಡೀ ಕಲ್ಪ ನೀವು ಶ್ರೇಷ್ಠವಾಗಿಯೇ ಇರುತ್ತೀರಿ. ತಿಳಿದಿದೆಯಲ್ಲವೇ? ನಿಮ್ಮ ಅನಾದಿಕಾಲವನ್ನು ನೋಡಿರಿ, ಅನಾದಿಕಾಲದಲ್ಲಿಯೂ ಆತ್ಮರಾದ ನೀವೆಲ್ಲರೂ ತಂದೆಗೆ ಸಮೀಪವಾಗಿ ಇದ್ದೀರಿ. ನೋಡುತ್ತಿದ್ದೀರಲ್ಲವೇ? ಅನಾದಿ ರೂಪದಲ್ಲಿ ತಂದೆಯೊಂದಿಗೆ ಸಮೀಪವಾಗಿ ಇರುವ ಶ್ರೇಷ್ಠಾತ್ಮರು ಎಲ್ಲರೂ ಇರುತ್ತಾರೆ ಆದರೆ ನಿಮ್ಮ ಸ್ಥಾನ ಬಹಳ ಸಮೀಪವಾಗಿರುತ್ತದೆ ಆದ್ದರಿಂದ ಅನಾದಿ ರೂಪದಲ್ಲಿಯೂ ಶ್ರೇಷ್ಠಾತಿ ಶ್ರೇಷ್ಠರು, ಆದಿಕಾಲದಲ್ಲಿ ಮಕ್ಕಳೆಲ್ಲರೂ ದೈವೀ ಪದವಿಯಿಂದ ದೇವತಾ ರೂಪದಲ್ಲಿ ಇರುತ್ತಾರೆ. ನಿಮ್ಮ ದೈವೀ ಸ್ವರೂಪ ಸ್ಮೃತಿ ಇದೆಯೇ? ಆದಿಕಾಲದಲ್ಲಿ ಸರ್ವಪ್ರಾಪ್ತಿ ಸ್ವರೂಪರು. ತನು, ಮನ, ಧನ ಮತ್ತು ಜನ ನಾಲ್ಕು ಸ್ವರೂಪಗಳಲ್ಲಿ ಶ್ರೇಷ್ಠವಾದವರು. ಸದಾ ಸಂಪನ್ನರು, ಸರ್ವಪ್ರಾಪ್ತಿ ಸ್ವರೂಪರು. ಈ ವಿಧವಾದ ದೈವೀ ಪದವಿ

ಇನ್ಯಾವುದೇ ಆತ್ಮನಿಗೆ ಲಭಿಸುವುದಿಲ್ಲ.  ಧರ್ಮಾತ್ಮರಾದರೂ, ಮಹಾತ್ಮರಾದರೂ ಆಗಲಿ ಈ ರೀತಿಯಾದ ಸರ್ವ ಪ್ರಾಪ್ತಿಗಳಿಂದ ಶ್ರೇಷ್ಠವಾಗಿ ಅಪ್ರಾಪ್ತಿಯ ಗುರುತುಗಳೇ ಇಲ್ಲದೇ ಯಾರು ಅನುಭವವನ್ನು ಮಾಡಿಕೊಳ್ಳಲಾಗುವುದಿಲ್ಲ. ಮಧ್ಯಕಾಲದಲ್ಲಿ ಬನ್ನಿರಿ  ಮಧ್ಯಕಾಲದಲ್ಲಿಯೂ ಆತ್ಮರಾದ ನೀವು ಪೂಜ್ಯರಾಗುತ್ತಿದ್ದೀರಿ. ನಿಮ್ಮ ಜಡ ಚಿತ್ರಗಳು ಪೂಜಿಸಲ್ಪಡುತ್ತಿವೆ. ಈ ವಿಧವಾದ ವಿಧಿಪೂರ್ವಕ ಪೂಜೆ ಯಾರಿಗೂ ಆಗುವುದಿಲ್ಲ. ಪೂಜ್ಯಾತ್ಮರಿಗೆ ಆಗುವಷ್ಟು ವಿಧಿಪೂರ್ವಕ ಪೂಜೆ ಮತ್ಯಾರಿಗಾದರೂ  ಆಗುತ್ತದೆಯೇ? ಯೋಚಿಸಿ ಪ್ರತಿಯೊಂದು ಕರ್ಮಕ್ಕೆ ಪೂಜೆಯಾಗುತ್ತದೆ ಏಕೆಂದರೆ ಕರ್ಮಯೋಗಿ ಆಗುತ್ತಿದ್ದೀರಲ್ಲವೇ?  ಆದ್ದರಿಂದ ಪೂಜೆಯು ಪ್ರತಿಯೊಂದು ಕರ್ಮಕ್ಕೆ ಆಗುತ್ತದೆ. ಧರ್ಮಾತ್ಮರನ್ನು, ಮಹಾತ್ಮರನ್ನು ಸಹ ಮಂದಿರದಲ್ಲಿ ಇಡುತ್ತಾರೆ ಆದರೆ ವಿಧಿಪೂರ್ವಕ ಪೂಜೆಯು ಆಗುವುದಿಲ್ಲ ಆದ್ದರಿಂದ ಮಧ್ಯಕಾಲದಲ್ಲಿಯೂ ಸಹ ನೀವು ಉನ್ನತವಾದವರು ಅರ್ಥಾತ್ ಶ್ರೇಷ್ಠವಾದವರು. ವರ್ತಮಾನ ಅಂತಿಮ ಕಾಲಕ್ಕೆ ಬನ್ನಿ, ಅಂತಿಮ ಕಾಲ ಈಗ ಸಂಗಮ ಯುಗದಲ್ಲಿಯೂ ಶ್ರೇಷ್ಠವಾದವರು ನಿಮ್ಮ ಶ್ರೇಷ್ಠತೆ ಏನು?  ಸ್ವಯಂ ಪರಮಾತ್ಮ ಮತ್ತು ಆದಿ ಆತ್ಮ ಅರ್ಥಾತ್ ಬ್ರಹ್ಮ ತಂದೆ ಇಬ್ಬರಿಂದ ಪಾಲನೆಯನ್ನು ಪಡೆಯುತ್ತಿದ್ದೀರಿ ಮತ್ತು ವಿದ್ಯಾಭ್ಯಾಸವನ್ನು ಮಾಡುತ್ತಿದ್ದೀರಿ.  ಜೊತೆ ಜೊತೆ ಸದ್ಗುರುವಿನಿಂದ ಶ್ರೀಮತವನ್ನು ಪಡೆಯುವ ಅಧಿಕಾರಿಯಾಗಿದ್ದೀರಿ ಆದ್ದರಿಂದ ಅನಾದಿಕಾಲ ಆದಿಕಾಲ ಮತ್ತು ಈಗ ಅಂತಿಮ ಕಾಲದಲ್ಲಿಯೂ ಸಹ ಉನ್ನತವಾದವರು ಮತ್ತು ಶ್ರೇಷ್ಠವಾದವರು, ಇಷ್ಟು ನಶೆ ಇರುತ್ತದೆಯೇ?

ಈಗ ಈ ಸ್ಮೃತಿಯನ್ನು ಪ್ರತ್ಯಕ್ಷ ಮಾಡಿರಿ ಎಂದು ಬಾಪ್‌ದಾದಾ ಹೇಳುತ್ತಿದ್ದಾರೆ ಮನಸ್ಸಿನಲ್ಲಿ, ಬುದ್ಧಿಯಲ್ಲೂ ಈ ಪ್ರಾಪ್ತಿಯನ್ನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಿರಿ.  ಸ್ಮೃತಿಯನ್ನು ಎಷ್ಟು ಪ್ರತ್ಯಕ್ಷವಾಗಿ ಇಟ್ಟುಕೊಳ್ಳುತ್ತೀರೋ ಅಷ್ಟು ಖುಷಿ ಇರುತ್ತದೆ. ಶಕ್ತಿಶಾಲಿಯಾಗುತ್ತೀರಿ. ಇಷ್ಟು ಶ್ರೇಷ್ಠ ಆತ್ಮರಾಗಿದ್ದೀರಿ ಎಂಬ ನಿಶ್ಚಯವು ಪಕ್ಕಾ ಇದೆಯೇ? ನಾವೇ ಉನ್ನತವಾಗಿ, ಶ್ರೇಷ್ಠವಾಗಿ ಆಗಿದ್ದೆವು ಮತ್ತು ಸದಾ ಆಗುತ್ತಾ ಇರುತ್ತೇವೆ ಎಂಬ ನಶೆ ಇದೆಯೇ? ನಿಶ್ಚಯವು ಪಕ್ಕಾ ಆಗಿದ್ದರೆ ಕೈಯನ್ನೆತ್ತಿರಿ, ಟೀಚರ್ಸ್ ಸಹ ಎತ್ತಿದ್ದಾರೆ ಮಾತೆಯರು ಸದಾ ಖುಷಿಯ ಉಯ್ಯಾಲೆಯಲ್ಲಿ ತೂಗುತ್ತಿರುತ್ತಾರೆ. ಮಾತೆಯರಿಗೆ ಬಹಳ ನಷೆ ಇದೆ. ಯಾವ ನಶೆ ಇರುತ್ತದೆ? ನಮಗಾಗಿ ತಂದೆಯು ಬಂದಿದ್ದಾರೆ ಎಂಬ ನಶೆ ಇದೆ ಅಲ್ಲವೇ? ದ್ವಾಪರ ಯುಗದಿಂದ ಎಲ್ಲರೂ ಕೆಳಕ್ಕೆ ಬೀಳಿಸಿದ್ದಾರೆ. ಆದ್ದರಿಂದ ಮಾತೆಯರೆಂದರೆ ತಂದೆಗೆ ಬಹಳಷ್ಟು ಪ್ರೀತಿ ಮತ್ತು ತಂದೆಯು ವಿಶೇಷವಾಗಿ ಮಾತೆಯರ ಸಲುವಾಗಿಯೇ ಬಂದಿದ್ದಾರೆ. ಮಾತೆಯರು ಖುಷಿಪಡುತ್ತಿದ್ದಾರೆ ಆದರೆ ಸದಾ ಖುಷಿಯಿಂದ ಇರಬೇಕು. ಈಗ ಕೈಯನ್ನು ಎತ್ತುತ್ತಿದ್ದೀರಿ ಮತ್ತೆ ರೈಲಿನಲ್ಲಿ ಹೋದ ನಂತರ ಸ್ವಲ್ಪ ಸ್ವಲ್ಪ ನಶೆ ಇಳಿಯಬಾರದು. ಸದಾ ಏಕರಸವಾಗಿ ಅವಿನಾಶಿ ನಶೆ ಇರಬೇಕು. ಆಗಾಗ ಇರುವ ನಶೆಯಲ್ಲ, ಸದಾಕಾಲದ ನಶೆಯು ಸದಾಕಾಲದ ಖುಷಿಯನ್ನು ಕೊಡುತ್ತದೆ. ಮಾತೆಯರಾದ ನಿಮ್ಮ ಮುಖ ದೂರದಿಂದಲೇ ಆತ್ಮಿಕ ಗುಲಾಬಿಯಂತೆ ಕಾಣಿಸುವ ಹಾಗೆ ಇರಬೇಕು. ಏಕೆಂದರೆ ಈ ವಿಶ್ವವಿದ್ಯಾಲಯದ ಒಂದು ವಿಷಯ ಎಲ್ಲರಿಗೂ ಇಷ್ಟವೆನಿಸುತ್ತದೆ. ಒಂದು ವಿಶೇಷತೆಯು ಕಾಣಿಸುತ್ತದೆ ಅದೇನೆಂದರೆ ಮಾತೆಯರು ಆತ್ಮಿಕ ಗುಲಾಬಿಯರಂತೆ ಸದಾ ಅರಳಿರುವ ಪುಷ್ಪಗಳಂತೆ ಇರುತ್ತಾರೆ ಮತ್ತು ಮಾತೆಯರೇ ಜವಾಬ್ದಾರಿಯನ್ನು ತೆಗೆದುಕೊಂಡು ಇಷ್ಟು ದೊಡ್ಡ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಮಹಾಮಂಡಲೇಶ್ವರರಾದರೂ ಅವರು ಸಹ ಇಲ್ಲಿ ಮಾತೆಯರೇ ನಿಮಿತ್ತವಾಗಿ ಇಷ್ಟು ಶ್ರೇಷ್ಠ ಕಾರ್ಯವನ್ನು ಸಹಜವಾಗಿ ನಡೆಸುತ್ತಿದ್ದಾರೆ ಎಂದುಕೊಳ್ಳುತ್ತಿದ್ದಾರೆ.  ಮಾತೆಯರಿಗಾಗಿ ಇಬ್ಬರು ಮಾತೆಯರು ಸೇರಿ ಯಾವುದಾದರೂ ಕಾರ್ಯವನ್ನು

ಮಾಡುವುದು ಬಹಳ ಕಷ್ಟ ಎಂದು ಹೇಳುತ್ತಿರುತ್ತಾರೆ. ಇದು ನಿಜವಲ್ಲ. ಆದರೆ ಹಾಗೆ ಹೇಳುತ್ತಾರಷ್ಟೇ ಅಲ್ಲವೇ? ಯಾರಾದರೂ ಭೇಟಿಯಾಗಲು ಬಂದರೆ ಏನನ್ನು ಕೇಳುತ್ತಾರೆ. ಮಾತೆಯರೇ  ನಡೆಸುತ್ತಿದ್ದಾರೆಯೇ? ಪರಸ್ಪರ ಜಗಳವಾಡುತ್ತಿಲ್ಲವೇ? ಜಗಳಗಳು ಬರುತ್ತಿಲ್ಲವೇ? ಎಂದು ಕೇಳುತ್ತಾರೆ. ಆದರೆ ಇವರು ಸಾಧಾರಣ ಮಾತೆಯರಲ್ಲ, ಪರಮಾತ್ಮನಿಂದ ತಯಾರಾದ ಆತ್ಮರು, ಮಾತೆಯರು, ಪರಮಾತ್ಮನ ವರದಾನ ಇವರನ್ನು ನಡೆಸುತ್ತಿದೆ ಎಂದು ಅವರಿಗೆ ಏನು ತಿಳಿದಿದೆ. ಮಾತೆಯರಿಗೆ ಮಾತ್ರ ಗೌರವವೇ, ನಮಗಿಲ್ಲವೇ ಎಂದು ಪಾಂಡವರು ತಿಳಿಯಬೇಡಿರಿ. ಪಂಚಪಾಂಡವರು ಎಂದು ನಿಮ್ಮ ಬಗ್ಗೆಯೂ ಮಹಿಮೆ ಇದೆ. ಶಕ್ತಿಗಳೊಂದಿಗೆ ಏಳು ದಿವ್ಯಶಕ್ತಿಗಳನ್ನು ಮತ್ತು ಅವರೊಂದಿಗೆ ಒಬ್ಬ  ಪಾಂಡವರನ್ನು ಸಹ ತೋರಿಸುತ್ತಾರೆ.  ಪಾಂಡವರು ಇಲ್ಲದೇ ಮಾತೆಯರು ಸಹ ನಡೆಸಲಾಗುವುದಿಲ್ಲ, ಮಾತೆಯರಿಲ್ಲದೇ ಪಾಂಡವರು ಸಹ ನಡೆಸಲಾಗುವುದಿಲ್ಲ. ಎರಡು ಭುಜಗಳು ಬೇಕು ಆದರೆ ಮಾತೆಯರನ್ನು ಬಹಳ ಕೆಳಕ್ಕೆ ಬೀಳಿಸಿಬಿಟ್ಟಿದ್ದಾರೆ ಆದ್ದರಿಂದ ತಂದೆಯು ಮಾತೆಯರ ಬಗ್ಗೆ ಪ್ರಪಂಚದವರು ಯಾವುದನ್ನಾದರೆ ಅಸಂಭವ ಎಂದು ಹೇಳಿದ್ದಾರೆಯೋ ಅದನ್ನು ಸಂಭವ ಮಾಡಿ ತೋರಿಸುತ್ತಿದ್ದಾರೆ. ಮಾತೆಯರು ನೋಡಿ ನಿಮಗೆ ಖುಷಿ ಇದೆ ಅಲ್ಲವೇ? ಅಥವಾ ಇಲ್ಲವೇ, ಸಂತೋಷವೇ ತಾನೇ?  ಒಂದು ವೇಳೆ ತಂದೆಯು ಮಾತೆಯರನ್ನು ನಿಮಿತ್ತ ಮಾಡದಿದ್ದರೆ ಹೊಸ ಜ್ಞಾನ, ಹೊಸ ಪದ್ಧತಿಯ ಕಾರಣವಾಗಿ ಪಾಂಡವರನ್ನು ನೋಡಿ ಬಹಳ ಜಗಳಗಳು ನಡೆಯುತ್ತಿದ್ದವು. ಇದು ಹೊಸ ಜ್ಞಾನ, ಹೊಸ ವಿಷಯ ಆದ್ದರಿಂದ ಮಾತೆಯರು ಢಾಲು(ಯುದ್ಧದಲ್ಲಿ ರಕ್ಷಣೆಗಾಗಿ ಹಿಡಿದುಕೊಳ್ಳುವ ವೃತ್ತಾಕಾರದ ಸಾಧನ) ಇದ್ದಂತೆ, ಆದರೆ ಅಕ್ಕನವರೊಂದಿಗೆ ಅಣ್ಣನವರು ಸದಾ ಜೊತೆಯೇ ಇರುತ್ತಾರೆ. ಪಾಂಡವರು ಮತ್ತೆ ಮಾತೆಯರು ತಮ್ಮ ತಮ್ಮ ಕಾರ್ಯಗಳಲ್ಲಿ ಮುಂದೆ ಇರುತ್ತಾರೆ. ಇಬ್ಬರ ಸಲಹೆಯಿಂದ ನಿರ್ವಿಘ್ನವಾಗಿ ಪ್ರತಿಯೊಂದು ಕಾರ್ಯವು ನಡೆಯುತ್ತಿರುತ್ತದೆ. ಬಾಪ್‌ದಾದಾ ಪ್ರತಿದಿನ ಮಕ್ಕಳ ವಿವಿಧ ಕಾರ್ಯಗಳನ್ನು ನೋಡುತ್ತಾ ಇರುತ್ತಾರೆ. ಹೊಸ ಹೊಸ ಪ್ಲಾನ್ಸ್ ತಯಾರಾಗುತ್ತಾ ಇರುತ್ತವೆ. ಸಮಯ ಎಲ್ಲರಿಗೂ ಸ್ಮೃತಿ ಇದೆಯೇ? ಇದೆಯಾ ಸ್ಮೃತಿ? 99ನೆಯ ವರ್ಷ ಎಂಬ ವಿಷಯವು ಸಹ ಪೂರ್ತಿಯಾಗಿ ಬಿಡುತ್ತಿದೆ. 99 ಬಂದುಬಿಟ್ಟಿತ್ತು, 99 ಬಂದು ಬಿಟ್ಟಿತು ಎಂದು ತಿಳಿಯುತ್ತಿದ್ದಿರಿ. ಆದರೆ ನೀವೆಲ್ಲರೂ ಸೇವೆ ಮಾಡಲು ನಿರ್ವಿಘ್ನವಾಗಲು ಈ ವರ್ಷ ಲಭಿಸಿದೆ. 99 ರ ವರ್ಷದಲ್ಲಿ ಮೌನ ಭಟ್ಟಿಗಳು ಮಾಡುತ್ತಿದ್ದೀರಲ್ಲವೇ. ಪ್ರಪಂಚವೆಲ್ಲಾ ಭಯಪಡುತ್ತಿದೆ ಆದರೆ ಅವರು ಎಷ್ಟು ಭಯ ಪಡುತ್ತಿದ್ದಾರೆಯೋ ನೀವು ಅಷ್ಟು ಸ್ಮೃತಿಯ ಆಳದಲ್ಲಿ ಹೋಗುತ್ತಿದ್ದೀರಿ.  ಮನಸ್ಸಿನ ಮೌನ ಅರ್ಥಾತ್ ಜ್ಞಾನ ಸಾಗರದ ಆಳದಲ್ಲಿ ಹೋಗುವುದು ಮತ್ತು ಹೊಸ ಹೊಸ ಅನುಭವಗಳೆಂಬ ರತ್ನಗಳನ್ನು ತರುವುದು. ಬಾಪ್‌ದಾದಾ ಇಷ್ಟಕ್ಕೂ ಮುಂಚೆಯೂ ಸಹ ಸೂಚನೆಯನ್ನು **ಕೊಟ್ಟಿದ್ದರು ಎಲ್ಲದಕ್ಕಿಂತಲೂ ಶ್ರೇಷ್ಠ ಖಜಾನೆ, ವರ್ತಮಾನ ಮತ್ತು ಭವಿಷ್ಯತ್ತನ್ನು ತಯಾರು ಮಾಡುವ ಶ್ರೇಷ್ಠ ಖಜಾನೆ- ಶ್ರೇಷ್ಠ ಸಂಕಲ್ಪಗಳ ಖಜಾನೆ. ಸಂಕಲ್ಪ ಶಕ್ತಿ ಬಹಳ ಶ್ರೇಷ್ಠಶಕ್ತಿ. ಮಕ್ಕಳಾದ ನಿಮ್ಮ ಹತ್ತಿರ ಇರುವುದು - ಶ್ರೇಷ್ಠ ಸಂಕಲ್ಪ ಶಕ್ತಿ. ಸಂಕಲ್ಪಗಳಂತು ಎಲ್ಲರ ಹತ್ತಿರವೂ ಇವೆ ಆದರೆ ಶ್ರೇಷ್ಠಶಕ್ತಿ, ಶುಭ ಭಾವನೆ, ಶುಭಕಾಮನೆಯ ಸಂಕಲ್ಪ ಶಕ್ತಿ, ಮನಸ್ಸು, ಬುದ್ಧಿಯನ್ನು ಏಕಾಗ್ರ ಮಾಡುವ ಶಕ್ತಿ, ಇವು ನಿಮ್ಮ ಹತ್ತಿರವೇ ಇರುತ್ತವೆ.** ಎಷ್ಟು ಮುಂದಕ್ಕೆ ಹೋಗುತ್ತಾ ಇರುತ್ತೀರೋ ಅಷ್ಟು ಈ ಸಂಕಲ್ಪ ಶಕ್ತಿಯನ್ನು ಜಮಾ ಮಾಡಿಕೊಳ್ಳುತ್ತಾ ಇರುತ್ತೀರಿ.  ವ್ಯರ್ಥವಾಗಿ ಕಳೆಯುವುದಿಲ್ಲ.  ವ್ಯರ್ಥವಾಗಿ ಹೋಗಲು ಮುಖ್ಯ ಕಾರಣ- ವ್ಯರ್ಥ ಸಂಕಲ್ಪಗಳು. ಹೆಚ್ಚು  ಮಕ್ಕಳಲ್ಲಿ ದಿನವಿಡೀ ಈಗಲೂ ವ್ಯರ್ಥವಿದೆ. ಹೇಗಾದರೆ ಸ್ಥೂಲ ಧನವನ್ನು ಉಳಿತಾಯದಿಂದ ಉಪಯೋಗಿಸುವವರು ಸದಾ ಸಂಪನ್ನವಾಗಿ ಇರುತ್ತಾರೆ ಮತ್ತು ವ್ಯರ್ಥವಾಗಿ ಕಳೆದುಕೊಳ್ಳುವವರು ಎಲ್ಲೋ ಒಂದು ಕಡೆ ಮೋಸ ಹೋಗುತ್ತಾರೆಯೋ ಅದೇ ರೀತಿ ಶ್ರೇಷ್ಠ ಸಂಕಲ್ಪಗಳಲ್ಲಿ ಎಷ್ಟು ಶಕ್ತಿ ಇದೆ ಎಂದರೆ ಅದರಿಂದ

ನಿಮ್ಮ ಗ್ರಹಣ ಶಕ್ತಿ, ತರಂಗಗಳನ್ನು ಪಡೆಯುವ ಶಕ್ತಿ, ಬಹಳಷ್ಟು ಹೆಚ್ಚಾಗುತ್ತದೆ. ವಯರ್ಲೆಸ್, ಟೆಲಿಫೋನ್ ಮೊದಲಾದ ವಿಜ್ಞಾನ ಸಾಧನಗಳು ಯಾವ ರೀತಿ ಕೆಲಸ ಮಾಡುತ್ತವೆಯೋ ಅದೇ ರೀತಿ ಈ ಶುದ್ಧ ಸಂಕಲ್ಪಗಳ ಖಜಾನೆಯೂ ಕೆಲಸ ಮಾಡುತ್ತದೆ. ಲಂಡನ್ ನಲ್ಲಿರುವ ಯಾವ ಆತ್ಮನ ತರಂಗಗಳಾದರೂ ನಿಮಗೆ ಹೇಗೆ ತಲುಪುತ್ತವೆ ಎಂದರೆ, ವಯರ್ಲೆಸ್, ಟೆಲಿಫೋನ್, ಟಿ.ವಿ ಹೀಗೆ ಸಾಧನೆಗಳು ಬಂದಿವೆಯಲ್ಲವೇ ಅವುಗಳಿಗಿಂತಲೂ ಸ್ಪಷ್ಟವಾಗಿ ನೀವು ಗ್ರಹಿಸಬಲ್ಲಿರಿ. **ಏಕಾಗ್ರತಾ ಶಕ್ತಿಯಿಂದ ಗ್ರಹಣ ಶಕ್ತಿಯು ಹೆಚ್ಚಾಗುತ್ತದೆ. ಈ ಆಧಾರಗಳೆಲ್ಲವೂ (ಸಾಧನಗಳು) ಸಮಾಪ್ತಿ ಆಗಲಿದೆ. ಈ ಸಾಧನಗಳೆಲ್ಲ ಯಾವುದರ ಆಧಾರದಿಂದ ಕೆಲಸ ಮಾಡುತ್ತವೆ? ಕರೆಂಟಿನ ಆಧಾರದಿಂದ. ಸುಖ ಸಾಧನಗಳೆಲ್ಲವೂ ಹೆಚ್ಚಾಗಿ ಕರೆಂಟಿನ ಆಧಾರದಿಂದಲೇ ಕೆಲಸ ಮಾಡುತ್ತವೆ. ಆದರೆ ನಿಮ್ಮ ಆಧ್ಯಾತ್ಮಿಕ ಪ್ರಕಾಶ, ಆತ್ಮಿಕ ಪ್ರಕಾಶ ಈ ಕೆಲಸವನ್ನು ಮಾಡಲಾಗುವುದಿಲ್ಲವೇ? ಹತ್ತಿರ ಅಥವಾ ದೂರ ಇರುವ ತರಂಗಗಳನ್ನು ಸಹ ಗ್ರಹಿಸಬಲ್ಲಿರಿ. ಆದರೆ ಈಗ ಮನಸ್ಸು, ಬುದ್ಧಿ ಎರಡೂ ಏಕಾಗ್ರವಾಗಬೇಕು. ಏಕಾಗ್ರತೆಯ ಶಕ್ತಿಯಿಂದಲೇ ಗ್ರಹಣ ಶಕ್ತಿಯು ಹೆಚ್ಚಾಗುತ್ತದೆ. ಬಹಳಷ್ಟು ಅನುಭವಗಳನ್ನು ಮಾಡಿಕೊಳ್ಳುತ್ತಿದ್ದೀರಿ. ನಿಸ್ವಾರ್ಥವಾಗಿ, ಸ್ವಚ್ಛವಾಗಿ, ಸ್ಪಷ್ಟವಾಗಿ ಸಂಕಲ್ಪ ಮಾಡುತ್ತಲೇ ಅವು ಬಹಳ ಬೇಗ ಅನುಭವ ಮಾಡಿಸುತ್ತವೆ.** ಶಾಂತಿ ಶಕ್ತಿಯ ಮುಂದೆ ವಿಜ್ಞಾನ ಶಕ್ತಿಯೂ ಬಾಗುತ್ತದೆ, ವಿಜ್ಞಾನದಲ್ಲಿಯೂ ಸಹ ಯಾವುದೋ ಒಂದು ಲೋಪ ಇದೆ ಅದನ್ನು ತೊಲಗಿಸಿಕೊಳ್ಳಬೇಕು ಎಂದು ಈಗಲೂ ಭಾವಿಸುತ್ತಿದ್ದಾರೆ ಆದ್ದರಿಂದ ಬಾಪ್‌ದಾದಾ ಮತ್ತೆ ಗಮನವನ್ನು ಸೆಳೆಯುತ್ತಿದ್ದಾರೆ- ಇದೇ ಅಂತಿಮ ಸ್ಥಿತಿ ಮತ್ತು ಅಂತಿಮ ಸೇವೆ ಈ ಸಂಕಲ್ಪ ಶಕ್ತಿಯು ಸೇವೆಯನ್ನು ಬಹಳ ತೀವ್ರವಾಗಿ ಮಾಡುತ್ತದೆ. ಆದ್ದರಿಂದ ಸಂಕಲ್ಪ ಶಕ್ತಿಯ ಮೇಲೆ ಇನ್ನಷ್ಟು ಗಮನವಿಡಿ, ಉಳಿತಾಯ ಮಾಡಿರಿ ಮತ್ತು ಜಮಾ ಮಾಡಿಕೊಳ್ಳಿರಿ. ಇದು ಬಹಳ ಕೆಲಸಕ್ಕೆ ಬರುತ್ತದೆ. ಈ ಸಂಕಲ್ಪ ಶಕ್ತಿಯಿಂದಲೇ ಪ್ರಯೋಗಿ ಆಗಬಲ್ಲಿರಿ. ವಿಜ್ಞಾನಕ್ಕೆ ಏಕೆ ಶ್ರೇಷ್ಠತೆ ಇದೆ? ಪ್ರಯೋಗದಲ್ಲಿ ಬರುತ್ತಿದೆ ಆದ್ದರಿಂದಲೇ ವಿಜ್ಞಾನ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಎಲ್ಲರೂ ಭಾವಿಸುತ್ತಾರೆ. ಅದೇ ರೀತಿ ಶಾಂತಿಯ ಶಕ್ತಿಯನ್ನು ಪ್ರಯೋಗಿಸಲು ಏಕಾಗ್ರತಾ ಶಕ್ತಿ ಬೇಕು. ಏಕಾಗ್ರತೆಗೆ ಮುಖ್ಯ ಆಧಾರ ಮನಸ್ಸನ್ನು ನಿಯಂತ್ರಣ ಮಾಡುವ ಶಕ್ತಿ. ಇದರಿಂದ ಮನೋಬಲವು ಹೆಚ್ಚಾಗುತ್ತದೆ. ಮನೋಬಲಕ್ಕೆ ಶ್ರೇಷ್ಠ ಮಹಿಮೆ ಇದೆ. ಮಂತ್ರ ತಂತ್ರದವರು ಸಹ ಮನೋಬಲದಿಂದ ಅಲ್ಪಕಾಲದ ಅದ್ಭುತವನ್ನು ಮಾಡಿ ತೋರಿಸುತ್ತಾರೆ. ಅದೇ ಅವರಿಗೆ ವರದಾನವಾಗಿಬಿಡುತ್ತದೆ. ಸಂಕಲ್ಪ ಶಕ್ತಿಯ ಪ್ರಯೋಗ ಆತ್ಮರಿಗೆ ವರದಾನವಾಗಿ ಸಿದ್ಧಿಸುತ್ತದೆ. ಆದ್ದರಿಂದ ಮೊದಲು ಮನಸ್ಸನ್ನು ನಿಯಂತ್ರಣ ಮಾಡುವ ನಿಯಂತ್ರಣಾ ಶಕ್ತಿ ಇದೆಯೇ ಎಂದು ಪರಿಶೀಲಿಸಿಕೊಳ್ಳಿರಿ. ವಿಜ್ಞಾನ ಶಕ್ತಿಯು ಸ್ವಿಚ್ ಆನ್ ಮಾಡಿದರೆ ಕ್ಷಣದಲ್ಲಿ ಕೆಲಸ ಮಾಡಿ ಬಿಡುತ್ತದೆ. ಆಫ್ ಮಾಡಿದರೆ ನಿಂತು ಹೋಗುತ್ತದೆ. ಅದೇ ರೀತಿ ಒಂದು ಕ್ಷಣದಲ್ಲಿ ಮನಸ್ಸನ್ನು ಎಲ್ಲಿ ಬೇಕೆಂದರೆ ಅಲ್ಲಿ, ಎಷ್ಟು ಸಮಯ ಬೇಕೆಂದರೆ ಅಷ್ಟು ಸಮಯ ನಿಯಂತ್ರಣ ಮಾಡಲಾಗುತ್ತಿದೆಯೇ? ಇದರಿಂದ ಸ್ವಯಂಗಾಗಿ ಮತ್ತು ಸೇವೆಗಾಗಿಯೂ ಬಹಳ ಒಳ್ಳೆಯ ಸಿದ್ಧಿ ರೂಪಗಳು ಕಾಣಿಸುತ್ತವೆ. ಆದರೆ ಸಂಕಲ್ಪ ಶಕ್ತಿಯ ಜಮಾ ಖಾತೆಯ ಮೇಲೆ ಗಮನವು ಈಗ ಸಾಧಾರಣವಾಗಿ ಇರುವಂತೆ ಬಾಪ್‌ದಾದಾ ನೋಡಿದರು. ಎಷ್ಟು ಇರಬೇಕೋ ಅಷ್ಟು ಇಲ್ಲ, ಸಂಕಲ್ಪದ ಆಧಾರದಿಂದ ಮಾತು ಮತ್ತು ಕರ್ಮ ಸ್ವತಹವಾಗಿ ಇರುತ್ತವೆ. ಬೇರೆ ಬೇರೆ ಶ್ರಮ ಮಾಡಬೇಕಾಗಿರುವ ಅವಶ್ಯಕತೆ ಇಲ್ಲ. ಇಂದು ಮಾತುಗಳನ್ನು ನಿಯಂತ್ರಣ ಮಾಡಿಕೊಳ್ಳಬೇಕು, ಇಂದು ದೃಷ್ಟಿಯ ಮೇಲೆ ಗಮನವನ್ನಿಡಬೇಕು, ಇಂದು ವೃತ್ತಿಯ ಮೇಲೆ ಗಮನವನ್ನು ಇಟ್ಟುಕೊಂಡು ಪರಿವರ್ತನೆ ಮಾಡಿಕೊಳ್ಳಬೇಕು ಎಂದು ಶ್ರಮಿಸುವ ಅವಶ್ಯಕತೆ ಇರುವುದಿಲ್ಲ. ಸಂಕಲ್ಪ ಶಕ್ತಿಯು ಶಕ್ತಿಶಾಲಿಯಾಗಿ ಇದ್ದರೆ

ಇವೆಲ್ಲವೂ ಸ್ವತಹವಾಗಿ ಕಂಟ್ರೋಲ್ ನಲ್ಲಿ ಬರುತ್ತವೆ ಶ್ರಮದಿಂದ ರಕ್ಷಿಸಲ್ಪಡುತ್ತೀರಿ, ಆದ್ದರಿಂದ ಸಂಕಲ್ಪ ಶಕ್ತಿಯ ಶ್ರೇಷ್ಠತೆಯನ್ನು ತಿಳಿದುಕೊಳ್ಳಿರಿ.

ಇವೆಲ್ಲವೂ ಅಭ್ಯಾಸವಾಗಬೇಕೆಂದೇ ವಿಶೇಷವಾಗಿ ಭಟ್ಟಿಗಳನ್ನು ಇಡುತ್ತಾರೆ. ಇಲ್ಲಿಯ ಈ ಅಭ್ಯಾಸವು ಸಹ ಭವಿಷ್ಯತ್ತಿನ ಗಮನವನ್ನು ಕೊಡಿಸುತ್ತಿರುತ್ತದೆ. ಆಗಲೇ ಅವಿನಾಶಿಯಾಗುತ್ತದೆ. ಶ್ರೇಷ್ಠತೆ ಏನೆಂದು ತಿಳಿಯಿತೇ? ತಂದೆ ಕೊಟ್ಟಿರುವ ಎಲ್ಲಾ ಶ್ರೇಷ್ಠಾತಿ ಶ್ರೇಷ್ಠ ಖಾಜಾನೆಯು ನಿಮ್ಮ ಹತ್ತಿರ ಇದೆ. ಶ್ರೇಷ್ಠ ಸಂಕಲ್ಪ, ಶುಭ ಭಾವನೆ, ಶುಭಕಾಮನೆಯಿಂದ ಕೂಡಿದ ಸಂಕಲ್ಪದ ಖಜಾನೆ ಇದೆಯೇ? ತಂದೆ ಎಲ್ಲರಿಗೂ ಕೊಟ್ಟಿದ್ದಾರೆ ಆದರೆ ನಂಬರ್‌ವಾರ್ ಆಗಿ ಜಮಾ ಮಾಡಿಕೊಳ್ಳುತ್ತಿದ್ದೀರಿ ಮತ್ತು ಪ್ರಯೋಗದಲ್ಲಿ ತರುವ ಶಕ್ತಿಯು ಸಹ ನಂಬರ್‌ವಾರ್ ಆಗಿರುತ್ತದೆ. ಶುಭಭಾವನೆ, ಶುಭಕಾಮನೆ ಇದರ ಪ್ರಯೋಗ ಈಗಲೂ ಸಹ ಮಾಡಿದ್ದೀರಾ? ವಿಧಿಪೂರ್ವಕವಾಗಿ ಮಾಡುವುದರಿಂದ ಸಿದ್ಧಿಯ ಅನುಭವವಾಗುತ್ತಿದೆಯೇ? ಈಗ ಸ್ವಲ್ಪ ಸ್ವಲ್ಪವಾಗಿ ಅನುಭವವಾಗುತ್ತಿದೆ. ಕೊನೆಯಲ್ಲಿ ನಿಮ್ಮ ಸಂಕಲ್ಪ ಶಕ್ತಿ ಎಷ್ಟು ಶ್ರೇಷ್ಠವಾಗಿ ಬಿಡುತ್ತದೆ ಎಂದರೆ ಸೇವೆಯಲ್ಲಿ ಬಾಯಿಂದ ಸಂದೇಶ ಕೊಡಲು, ಸಮಯವನ್ನು, ಧನವನ್ನು ಉಪಯೋಗಿಸುತ್ತಿದ್ದೀರಿ. ಇದರಿಂದ ಸುಸ್ತಾಗುತ್ತಿದ್ದೀರಿ ಮತ್ತು ಏರುಪೇರಿನಲ್ಲಿಯೂ ಬರುತ್ತಿದ್ದೀರಿ. ಆದರೆ ಶ್ರೇಷ್ಠ ಸಂಕಲ್ಪಗಳ ಸೇವೆಯಲ್ಲಿ ಇವೆಲ್ಲವೂ ರಕ್ಷಿಸಲ್ಪಡುತ್ತವೆ ಆದ್ದರಿಂದ ಇದನ್ನು ಹೆಚ್ಚಿಸಿಕೊಳ್ಳಿರಿ. ಈ ಸಂಕಲ್ಪ ಶಕ್ತಿಯನ್ನು ಬೆಳೆಸಿಕೊಳ್ಳುವುದರಿಂದ ಪ್ರತ್ಯಕ್ಷತೆಯು ಸಹ ಬೇಗನೆ ಆಗುತ್ತದೆ. ಈಗ 62, 63 ವರ್ಷಗಳಾಗಿ ಬಿಟ್ಟಿದೆ. ಇಷ್ಟು ಸಮಯದಲ್ಲಿ ಎಷ್ಟು ಜನ ಆತ್ಮರನ್ನು ತಯಾರು ಮಾಡಿದ್ದೀರಿ? 9 ಲಕ್ಷ ಜನರೂ ಸಹ ಪೂರ್ತಿ ಆಗಲಿಲ್ಲ. ವಿಶ್ವವೆಲ್ಲಾ ಸಂದೇಶವನ್ನು ತಲುಪಿಸಬೇಕೆಂದರೆ ಎಷ್ಟು ಕೋಟಿ ಆತ್ಮರಿದ್ದಾರೆ. **ಇಲ್ಲಿಯವರೆಗೂ ಸಹ ಭಗವಂತನು ಇವರ ಟೀಚರ್, ಭಗವಂತನು ಇವರನ್ನು ನಡೆಸುತ್ತಿದ್ದಾರೆ, ಮಾಡಿಸುವವರು ಪರಮಾತ್ಮ ಎಂಬುದು ಸ್ಪಷ್ಟವಾಗಿಲ್ಲ. ಒಳ್ಳೆಯ ಕಾರ್ಯ, ಶ್ರೇಷ್ಠ ಕಾರ್ಯವನ್ನು ಮಾಡುತ್ತಿದ್ದಾರೆ ಎಂಬ ಮಾತಂತೂ ಬಂದಿದೆ. ಆದರೆ ಮಾಡಿಸುವವರು ಇಲ್ಲಿಯವರೆಗೂ ಗುಪ್ತವಾಗಿದ್ದಾರೆ.** ಈ ಸಂಕಲ್ಪ ಶಕ್ತಿಯಿಂದ ಬುದ್ಧಿಯನ್ನು ಪರಿವರ್ತನೆ ಮಾಡಲಾಗುತ್ತಿದೆಯೇ? ಆಯ್ಯೋ ಪ್ರಭು ಎಂಬ ರೂಪದಲ್ಲಾದರೂ ಅಥವಾ ತಂದೆಯ ರೂಪದಲ್ಲಾದರೂ ಪ್ರತ್ಯಕ್ಷವಾಗಬೇಕು. ಆದ್ದರಿಂದ ಬಾಪ್‌ದಾದಾ ಈಗಲೂ ಸಹ ಮತ್ತೆ ಗಮನವನ್ನು ಸೆಳೆಯುತ್ತಿದ್ದಾರೆ. ಸಂಕಲ್ಪ ಶಕ್ತಿಯನ್ನು ಹೆಚ್ಚಿಸಿಕೊಳ್ಳಿರಿ ಮತ್ತು ಪ್ರಯೋಗದಲ್ಲಿ ತರುತ್ತಾ ಇರಿ. ಅರ್ಥವಾಯಿತೇ?

ಮನಸ್ಸು ಏಕಾಗ್ರವಾಗಬೇಕೆಂದು ಬಾಪ್‌ದಾದಾ ಯಾವ ಅಭ್ಯಾಸವನ್ನಾದರೆ ತಿಳಿಸಿದ್ದಾರೆಯೋ ಅದನ್ನು ಮಾಡಬೇಕು. ಏಕೆಂದರೆ ಸಮಸ್ಯೆಯು ಅಕಸ್ಮಾತ್ತಾಗಿ ಬರುತ್ತದೆ. ಆದ್ದರಿಂದ ಆ ಸಮಯದಲ್ಲಿಯೇ ಮನೋಬಲವಿದ್ದರೆ ಸಮಸ್ಯೆಯು ಸಮಾಪ್ತಿಯಾಗಿಬಿಡುತ್ತದೆ. ಸಮಸ್ಯೆಯು ಪಾಠವನ್ನು ಕಲಿಸಲು ನಿಮಿತ್ತ. ಇಡೀ ದಿನದಲ್ಲಿ ಈ ವ್ಯಾಯಾಮವನ್ನು ಅಭ್ಯಾಸ ಮಾಡುತ್ತಾ ಇರಿ. ಒಳ್ಳೆಯದು.

**ನಾಲ್ಕು ಕಡೆ ಇರುವಂತಹ ಶ್ರೇಷ್ಠಾತ್ಮರಿಗೆ, ಆದಿ, ಮಧ್ಯ, ಅಂತಿಮದಲ್ಲಿ ಶ್ರೇಷ್ಠ ಪಾತ್ರವನ್ನು ಅಭಿನಯಿಸುವ ಆತ್ಮರಿಗೆ, ಸದಾ ನಿಮ್ಮ ಶ್ರೇಷ್ಠ ಸಂಕಲ್ಪದ ವಿಧಿಯನ್ನು ಅನುಭವ ಮಾಡಿಕೊಳ್ಳುವವರಿಗೆ, ಸದಾ ಸಹಜ ಯೋಗದ ಜೊತೆ ಜೊತೆ**

**ಪ್ರಯೋಗಿಯಾಗುವವರಿಗೆ, ಸಂಕಲ್ಪ ಶಕ್ತಿಯ ಮೂಲಕ ಸದಾ ಸರ್ವ ಶಕ್ತಿಗಳನ್ನು ಹೆಚ್ಚಿಸಿಕೊಳ್ಳುವವರಿಗೆ, ಮನಸ್ಸು, ಬುದ್ಧಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವವರಿಗೆ, ಸದಾ ಪ್ರಯೋಗಿ ಮಕ್ಕಳಿಗೆ, ಬಾಪ್‌ದಾದಾರವರ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 15-12-1999.

***ಸಂಕಲ್ಪ ಶಕ್ತಿಯ ಮಹತ್ವವನ್ನು ತಿಳಿದು ಅದನ್ನು ಹೆಚ್ಚಿಸಿಕೊಳ್ಳಿರಿ ಮತ್ತು ಪ್ರಯೋಗದಲ್ಲಿ ತನ್ನಿರಿ***

ಇಲ್ಲಿಯವರೆಗೂ ಸಹ ಭಗವಂತನು ಇವರ ಟೀಚರ್, ಭಗವಂತನು ಇವರನ್ನು ನಡೆಸುತ್ತಿದ್ದಾರೆ, ಮಾಡಿಸುವವರು ಪರಮಾತ್ಮ ಎಂಬುದು ಸ್ಪಷ್ಟವಾಗಿಲ್ಲ. ಒಳ್ಳೆಯ ಕಾರ್ಯ, ಶ್ರೇಷ್ಠ ಕಾರ್ಯವನ್ನು ಮಾಡುತ್ತಿದ್ದಾರೆ ಎಂಬ ಮಾತಂತೂ ಬಂದಿದೆ. ಆದರೆ ಮಾಡಿಸುವವರು ಇಲ್ಲಿಯವರೆಗೂ ಗುಪ್ತವಾಗಿದ್ದಾರೆ. ಎಂದು ತಿಳಿಸುತ್ತಾ ಆದಿ, ಅನಾದಿ, ಮಧ್ಯ, ಮತ್ತು ವರ್ತಮಾನ ಕಾಲದಲ್ಲಿಯೂ ಶ್ರೇಷ್ಠವಾದ ಆತ್ಮರೊಂದಿಗೆ ಶಿವಪರಮಾತ್ಮ ವಾರ್ತಾಲಾಪಿಸಿದ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅನಾದಿಕಾಲದಲ್ಲಿಯೂ ತಂದೆಗೆ ಸಮೀಪವಾಗಿ, ಆದಿಕಾಲದಲ್ಲಿ ದೇವತಾ ಪದವಿಯೊಂದಿಗೆ, ಮಧ್ಯಕಾಲದಲ್ಲಿ ಪೂಜ್ಯನಾಗಿ, ಅಂತಿಮದಲ್ಲಿ ಸ್ವಯಂ ಪರಮಾತ್ಮ ಮತ್ತು ಆದಿ ಆತ್ಮ ಅರ್ಥಾತ್ ಬ್ರಹ್ಮಾ ತಂದೆ ಇಬ್ಬರಿಂದ ಪಾಲನೆ, ವಿದ್ಯಾಭ್ಯಾಸವನ್ನು ಮತ್ತು ಸದ್ಗುರುವಿನಿಂದ ಶ್ರೀಮತವನ್ನು ಪಡೆಯುವ ಅಧಿಕಾರಿಯಾಗಿದ್ದೇನೆ.

2. ನಾನು ಅನಾದಿಕಾಲ, ಆದಿಕಾಲ ಮತ್ತು ಅಂತಿಮ ಕಾಲದಲ್ಲಿಯೂ ಶ್ರೇಷ್ಠವಾದವನು ಎಂಬ ಸ್ಮೃತಿಯನ್ನು ಪ್ರತ್ಯಕ್ಷ ಮಾಡಿ ಆತ್ಮಿಕ ನಶೆ, ಖುಷಿಯನ್ನು ಅನುಭವ ಮಾಡುವ ಶಕ್ತಿಶಾಲಿ ಸ್ವರೂಪ.

3. ನನ್ನ ಹತ್ತಿರ ಶ್ರೇಷ್ಠ ಶಕ್ತಿಯಾದ ಶುಭ ಭಾವನೆ, ಶುಭಕಾಮನೆಯ ಸಂಕಲ್ಪ ಶಕ್ತಿ, ಮನಸ್ಸು, ಬುದ್ಧಿಯನ್ನು ಏಕಾಗ್ರ ಮಾಡುವ ಶಕ್ತಿ ಇದೆ ಎಂಬ ಸ್ಮೃತಿ ನನಗೆ ಇದೆ.

4. ನಾನು ಶ್ರೇಷ್ಠ ಸಂಕಲ್ಪಗಳಿಂದ ಗ್ರಹಣ ಶಕ್ತಿ, ತರಂಗಗಳನ್ನು ಪಡೆಯುವ ಶಕ್ತಿ ಅರ್ಥಾತ್ ವಯರ್ಲೆಸ್, ಟೆಲಿಫೋನ್, ಟಿ.ವಿ ಈ ವಿಜ್ಞಾನ ಸಾಧನೆಗಳಿಗಿಂತಲೂ ಸ್ಪಷ್ಟವಾಗಿ ಗ್ರಹಿಸುತ್ತಿದ್ದೇನೆ.

5. ನನ್ನ ಏಕಾಗ್ರತಾ ಶಕ್ತಿಯಿಂದ ಗ್ರಹಣ ಶಕ್ತಿಯು ಹೆಚ್ಚಾಗಿದೆ.

6. ನನ್ನ ಸಂಕಲ್ಪ ಶಕ್ತಿಯು (ನಿಸ್ವಾರ್ಥವಾದ, ಸ್ವಚ್ಛವಾದ, ಸ್ಪಷ್ಟವಾದ) ಅಂತಿಮ ಸೇವೆಯನ್ನು ಬಹಳಷ್ಟು ತೀವ್ರವಾಗಿ ಮಾಡಿದೆ ಮತ್ತು ಸಂಕಲ್ಪ ಶಕ್ತಿಯಿಂದ ನಾನು ಪ್ರಯೋಗಿಯಾಗಿದ್ದೇನೆ.

7. ನಾನು ಒಂದು ಕ್ಷಣದಲ್ಲಿ ಮನಸ್ಸನ್ನು ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ, ಎಷ್ಟು ಸಮಯ ಬೇಕಾದರೆ ಅಷ್ಟು ಸಮಯ ನಿಯಂತ್ರಿಸಬಲ್ಲ ನಿಯಂತ್ರಣಾ ಶಕ್ತಿ ಸ್ವರೂಪ.

8. ನನ್ನ ಶಕ್ತಿಶಾಲಿ ಸಂಕಲ್ಪದಿಂದ ಮಾತು, ದೃಷ್ಟಿ, ವೃತ್ತಿ, ಕರ್ಮ ಸ್ವತಹವಾಗಿ ಕಂಟ್ರೋಲ್ ನಲ್ಲಿ ಬಂದಿದೆ.

9. "ಭಗವಂತನು ಇವರ ಟೀಚರ್, ಭಗವಂತನು ಇವರನ್ನು ನಡೆಸುತ್ತಿದ್ದಾರೆ, ಮಾಡಿಸುವವರು ಪರಮಾತ್ಮ" ಎಂಬುದು ವಿಶ್ವದ ಮುಂದೆ ಪ್ರತ್ಯಕ್ಷವಾಯಿತು.

10. ಅಯ್ಯೋ ಪ್ರಭು ಎಂಬ ರೂಪದಲ್ಲಾದರೂ ಅಥವಾ ತಂದೆಯ ರೂಪದಲ್ಲಾದರೂ ಪರಮಾತ್ಮನು ಪ್ರತ್ಯಕ್ಷವಾಗಬೇಕೆಂಬ ನನ್ನ ಸಂಕಲ್ಪ ಶಕ್ತಿಯಿಂದ ಪ್ರತಿಯೊಬ್ಬರ ಬುದ್ಧಿಯನ್ನು ಪರಿವರ್ತನೆ ಮಾಡಿದ್ದೇನೆ.

11. ನಾನು ಬಾಪ್‌ದಾದಾ ಮನಸ್ಸು ಏಕಾಗ್ರವಾಗಬೇಕೆಂದು ತಿಳಿಸಿರುವ ಅಭ್ಯಾಸವನ್ನು ದಿನವಿಡೀ ಅಭ್ಯಾಸ ಮಾಡುವ ಆಜ್ಞಾಕಾರಿಯಾಗಿದ್ದೇನೆ.